# ತಾತ ನೆಟ್ಟ ಹಲಸಿನ ಮರ

■ ಚಂದ್ರಹಾಸ್ ಚಾರ್ಮಾಡಿ

ಪಶ್ಚಿಮಘಟ್ಟ ಅಂದ ಮೇಲೆ ಅಲ್ಲಿ ಹಸಿರಿಗೇನು ಕೊರತೆಯಿಲ್ಲ. ಗದ್ದೆ, ಹೊಲಗಳಲ್ಲಿ ಆಟವಾಡುತ್ತಾ ಹಳ್ಳಿಯ ಸೊಗಡನ್ನು ಆನಂದಿಸುತ್ತಾ, ಅನುಭವಿಸುತ್ತಾ ಬೆಳೆದ ಸಿದ್ದೇಶ್ ಹಟವಾದಿ. ಏಳನೇ ತರಗತಿಯಲ್ಲಿ ವಿದ್ಯಾಭ್ಯಾಸವನ್ನು ಕೊನೆಗೊಳಿಸಿ ಕೃಷಿ ಕೆಲಸದಲ್ಲಿ ತನ್ನೊಂದಿಗೆ ಸಹಕರಿಸುವಂತೆ ತಂದೆ ಕೇಳಿಕೊಂಡಾಗ ಊರು ಬಿಟ್ಟು ಹೋಗುವುದಾಗಿ ಎಲ್ಲರೆದುರು ಗಟ್ಟಿ ಧ್ವನಿಯಲ್ಲಿ ಹೇಳಿದ್ದ. ಹೇಗೋ ಕಷ್ಟಪಟ್ಟು ತಂದೆ ಪಿ.ಯು.ಸಿ.ವರೆಗೆ ಓದಿಸಿದರು. ನಂತರ ಬೇರೆಡೆಗಳಲ್ಲಿ ಒಂದೆರಡು ವರ್ಷಗಳ ಕಾಲ ದುಡಿದ. ಮುಂದೆ ತಂದೆಯ ಕೃಷಿ ಕೆಲಸಗಳಲ್ಲಿ ನೆರವಾಗುವುದಾಗಿ ಹೇಳಿ ಮನೆ ಸೇರಿಕೊಂಡ.

ಇರುವ ಒಬ್ಬನೇ ಮಗ ಮನೆಗೆ ಬಂದು ಸೇರಿದಾಗ ತಾಯಿ ಸೀತಾಳಿಗೆ ಆದ ಸಂತೋಷ ಅಷ್ಟಿಷ್ಟಲ್ಲ.

ಸಿದ್ದೇಶ್‌ಗೆ ತಂದೆಯ ಎಲ್ಲ ಗುಣಗಳು ಇಷ್ಟವಾಗುತ್ತಿದ್ದವು. ಆದರೆ ತಂದೆಗಿರುವ ಪರಿಸರ ಕಾಳಜಿ ಮಾತ್ರ ಇವನಿಗೆ ರುಚಿಸಲೇ ಇಲ್ಲ. ಒಂದು ಮರ ಕಡಿದರೆ ಅಲ್ಲಿ ಒಂದು ಸಸಿ ನೆಡಬೇಕೆಂಬ ಮಾತಿಗೆ ವಿರುದ್ಧವಾಗಿ ಸಿದ್ದೇಶ್ ಗಿಡ, ಮರಗಳನ್ನು ಕಡಿಯುವುದನ್ನು ಪ್ರೋತ್ಸಾಹಿಸುತ್ತಿದ್ದ. ಒಂದು ದಿನ ಇದ್ದಕ್ಕಿದ್ದಂತೆ ಮನೆ ಪಕ್ಕದಲ್ಲಿರುವ ಹಲಸಿನ ಮರವನ್ನು ಮಾರಾಟ ಮಾಡಿದರೆ ಕಡಿಮೆಯೆಂದರೂ ಎಂಬತ್ತು ಸಾವಿರ ರೂಪಾಯಿ ಸಿಗಬಹುದೆಂದು ಗೆಳೆಯನೊಬ್ಬ ಪುಕ್ಕಟೆ ಸಲಹೆ ನೀಡಿದ್ದ. ಅಂದಿನಿಂದ ಸಿದ್ದೇಶ್ ಹಲಸಿನ ಮರವನ್ನು ಕಡಿದು ಮಾರಾಟ ಮಾಡಲು ತುದಿಗಾಲಲ್ಲಿ ನಿಂತಿದ್ದ. ತಂದೆಯ ಬಳಿ ಕೇಳಿದಾಗ ಅದು ನಿನ್ನ ತಾತ ನೆಟ್ಟ ಮರ. ಅದನ್ನು ಎಂದಿಗೂ ಕಡಿಯಲು ಬಿಡುವುದಿಲ್ಲ ಎಂದು ಖಡಕ್ಕಾಗಿಯೇ ಉತ್ತರಿಸಿದರು. ಈ ಮಾತನ್ನು ಕೇಳಿ ಸಿದ್ದೇಶ್‌ಗೆ ತುಂಬಾ ಕೋಪ ಬಂತು. ಆದರೆ ಬೇರೆ ಉಪಾಯವಿಲ್ಲದೆ ಸುಮ್ಮನಾಗಿಬಿಟ್ಟ.

ಜೋರು ಗಾಳಿ ಬಂದರೆ ಹಲಸಿನ ಮರ ಮನೆಯ ಮೇಲೆ ಬೀಳುತ್ತದೆ ಎಂದು ತಾಯಿಯನ್ನು ಒಪ್ಪಿಸಲು ಮುಂದಾದ. 'ಅದೇ ಮರ ಯಾಕೆ ಬೀಳಬೇಕು? ಪಕ್ಕದಲ್ಲಿರುವ ತೆಂಗು, ಮಾವಿನ ಮರಗಳೇಕೆ ಬೀಳಬಾರದು?' ಎಂದು ತಾಯಿ ಪ್ರಶ್ನಿಸಿದರು. ತಾಯಿ ಕೂಡ ಇವನ ಮಾತಿಗೆ ಸೊಪ್ಪು ಹಾಕದೇ ಇದ್ದಾಗ ಗೆಳೆಯರೊಂದಿಗೆ ಸೇರಿಕೊಂಡು ಉಪಾಯದಿಂದ ಹೇಗಾದರು ಮಾಡಿ ಮರವನ್ನು ಮಾರಾಟ ಮಾಡಬೇಕೆಂದು ನಿರ್ಧರಿಸಿದ.

ಅದು ಅಮಾವಾಸ್ಯೆಯ ದಿನ. ತಂದೆ–ತಾಯಿ ಸಂಬಂಧಿಕರ ಮನೆಗೆ ಕಾರ್ಯಕ್ರಮಕ್ಕೆಂದು ತೆರಳಿದ್ದರು. ಆ ದಿನ ರಾತ್ರಿ ಗೆಳೆಯರೆಲ್ಲ ಸೇರಿ ಹಲಸಿನ ಮರವನ್ನು ಕಡಿಯುವುದೆಂದು ನಿರ್ಧಾರವಾಯಿತು. ಮರುದಿನ ಮನೆಯವರು ಕೇಳಿದಾಗ 'ಯಾರೋ ಕಳ್ಳರು ಮರ ಕಡಿಯುತ್ತಿದ್ದ ಶಬ್ದ ಕೇಳಿ ಎಚ್ಚರವಾಯಿತು. ಅಷ್ಟರಲ್ಲಿ ಮರ ನೆಲಕ್ಕುರುಳಿತು. ನನ್ನನ್ನು ನೋಡಿ ಕಳ್ಳರು ಓಡಿದರು' ಎಂಬ ಪೂರ್ವಯೋಜಿತ ಕಥೆಯೊಂದನ್ನು ಮನೆಯವರಿಗಾಗಿ ಸಿದ್ಧಪಡಿಸಿಕೊಂಡು ಮರ ಕಡಿಯಲು ಗೆಳೆಯರಿಗೆ ಗ್ರೀನ್ ಸಿಗ್ನಲ್ ನೀಡಿದ.

ಮರ ಕಡಿಯಲು ಗೆಳೆಯರು ಇನ್ನೇನು ಹೊರಡಬೇಕೆನ್ನುವಷ್ಟರಲ್ಲಿ ಮಿತ್ರ ಸುದೀಪ್‌ಗೆ ಸಿದ್ದೇಶ್ ಫೋನ್ ಕರೆ ಮಾಡಿದ. ಮೊಬೈಲ್ ಕೈಗೆತ್ತಿಕೊಂಡವನೆ 'ಸಿದ್ದೇಶ್ ಇಷ್ಟು ಅವಸರ ಮಾಡಬೇಡ. ಈಗ ಗಂಟೆ ಏಳು ಆಗಿದೆ ಅಷ್ಟೇ. ಎರಡು ತಾಸು ಬಿಟ್ಟು ಬರುತ್ತೇವೆ. ನಮ್ಮಲ್ಲಿ ಮರಕೊಯ್ಯುವ ಯಂತ್ರಗಳಿವೆ. ಆ ಮರವನ್ನು ನೆಲಕ್ಕುರುಳಿಸುವುದು ಅರ್ಧ ತಾಸಿನ ಕೆಲಸ.' ಎಂದು ಹೇಳಿ ಕರೆಯನ್ನು ಕಟ್ ಮಾಡಲು ಮುಂದಾದ.

ಆ ಕಡೆಯಿಂದ ಸಿದ್ದೇಶ್ 'ವೆರಿ ಸಾರಿ ಸುದೀಪ್. ಮರ ಕಡಿಯುವ ಯೋಚನೆಯನ್ನು ಕೈಬಿಡಬೇಕಿದೆ' ಎಂದು ಫೋನ್ ಕಟ್ ಮಾಡಿದ. ತಕ್ಷಣ ಗೆಳೆಯರೆಲ್ಲ ಸಿದ್ದೇಶ್‌ನ ಮನೆಗೆ ಧಾವಿಸಿದರು. ಸಿದ್ದೇಶ್ ನಡೆದ ಘಟನೆಯನ್ನೆಲ್ಲ ವಿವರಿಸಿದ. ಸಂಜೆಯಾಗುತ್ತಿದ್ದಂತೆ ಜೋರಾಗಿ ಗಾಳಿ ಬೀಸಿತು. ಗಾಳಿಯ ರಭಸಕ್ಕೆ ಹಲಸಿನ ಮರದ ಸಮೀಪದಲ್ಲಿರುವ ಮಾವಿನ ಮರ ಉರುಳಿತು. ಆಗ ನಾನು ಮನೆಯಂಗಳದಲ್ಲಿ ಕುಳಿತು ಓದುತ್ತಿದ್ದೆ. ತಾತ ನೆಟ್ಟ ಹಲಸಿನ ಮರ ಇರದೇ ಇದ್ದರೆ ಮಾವಿನ ಮರ ನನ್ನ ಮೇಲೆ ಬಿದ್ದು ನನ್ನ ಕಥೆಯನ್ನು ಮುಗಿಸುತ್ತಿತ್ತು. ಮಾವಿನ ಮರ ಬೀಳದಂತೆ ತಡೆಯುವ ಕೆಲಸವನ್ನು ಹಲಸಿನ ಮರ ಮಾಡಿತು. ನನ್ನ ಜೀವವನ್ನು ಉಳಿಸಿದ ಹಲಸಿನ ಮರವನ್ನು ಎಂದಿಗೂ ನಾನು ಕಡಿಯಲು ಬಿಡುವುದಿಲ್ಲ. ಆ ಮರ ನನ್ನ ಪಾಲಿನ ದೇವರು ಅಂದ. ■



ಸಂತೋಷ ಸಸಿಹಿತ್ಲು